ಅಪೂರ್ವ ಶಾಸ್ತ್ರವಾದ

(ಕಾಂಚೀನಗರದಲ್ಲಿ ನಡೆದ ದ್ವೈತಾದ್ವೈತ ವಿಚಾರ)

ಶ್ರೀಭಂಡಾರಕೇರಿ ಮಠಾಧೀಶರಾದ ಶ್ರೀಶ್ರೀವಿದ್ಯಾಮಾನ್ಯತೀರ್ಥ ಶ್ರೀಪಾದಂಗಳವರು ಕಳೆದ ಮನ್ಮಥ ಸಂವತ್ಸರದ ಫಾಲ್ಗುಣಶುದ್ಧ ತ್ರಯೋದಶೀ ದಿನ ಕಾಂಚೀ ನಗರಕ್ಕೆ ಸಂಚಾರ ಕ್ರಮದಿಂದ ಬಂದು ಸೇರಿದರು. ಇದೇ ಸಮಯದಲ್ಲಿ ಈ ನಗರದಲ್ಲಿ ಕುಂಭಕೋಣದ ಕಾಮಕೋಟಿ ಶಂಕರಾಚಾರ್ಯರ ಅಧ್ಯಕ್ಷತೆಯಲ್ಲಿ ಒಂದು ಅದ್ವೈತ ಸಭೆಯು ನಡೆಯುತ್ತಿತ್ತು. ಸಭೆಯಲ್ಲಿ ಹಲವಾರು ಅದ್ವೈತ ಘನ ಪಂಡಿತರು ಸೇರಿ ಪ್ರತಿದಿನಗಳಲ್ಲಿಯೂ ಅನೇಕ ಸಂದಿಗ್ಧಾಂಶ ವಿಚಾರವನ್ನು ಕೊನೆಗಾಣಿಸುತ್ತಿದ್ದರು. ಇವರಲ್ಲಿ ಪಾಲಘಾಟಿನ ಶ್ರೀ ಅನಂತ ಕೃಷ್ಣಶಾಸ್ತ್ರಿ ಮಹಾ ಮಹೋಪಾಧ್ಯಾಯ ಇವರೇ ಮೊದಲಾಗಿದ್ದವರು ಮುಂದಾಳುತನವನ್ನು ವಹಿಸಿದವರು. ಭಂಡಾರಕೇರಿ ಶ್ರೀಗಳವರ ಸಾಕ್ಷಾತ್ ಪರಿಚಯವು ಕಾಮಕೋಟಿ ಪೀಠಾಧೀಶರಿಗಿರುತ್ತಿರಲಿಲ್ಲವಾದರೂ ಶ್ರೀಗಳವರ ವಿದ್ವತ್ತೆ, ವಿದ್ಯಾಪಕ್ಷಪಾತ ಶಾಂತಿ, ದಾಂತಿ, ಔದಾರ್ಯಾದಿ ಅಮೋಘ ಗುಣಗಳನ್ನು (ಕರ್ಣಾಕರ್ಣಿಕತಯಾ) ಜನರ ಆಡಿಕೆಯಿಂದ ಅವರು ತಿಳಿದವರೇ ಆಗಿದ್ದರು. ಆದ್ದರಿಂದ ಈ ಪಂಡಿತರ ಸಭೆಗೆ ಭಂಡಾರಕೇರಿ ಮಠದ ಶ್ರೀಗಳವರನ್ನು ಕರೆಯಿಸಬೇಕೆಂದು ಶಂಕರಾಚಾರ್ಯರು ಅಭಿಪ್ರಾಯಪಟ್ಟು ಆಮಂತ್ರಣವನ್ನಿತ್ತರು. ಮರುದಿನ ಚತುರ್ದಶೀ ಪ್ರಾತಃಕಾಲ ೮ ಘಂಟೆಗೆ ಸರಿಯಾಗಿ ಭಂಡಾರಕೇರಿ ಶ್ರೀಗಳವರು ಆಮಂತ್ರಣಾನುಸಾರವಾಗಿ ಅದ್ವೈತ ಸಭಾ ಮಂಟಪಕ್ಕೆ ವಿಜಯಂಗೈಸಿದಾಗ ಪಂಡಿತರೆಲ್ಲರೂ ಸಭೆಯಕಡೆಯಿಂದ ಶ್ರೀಪಾದಂಗಳವರಿಗೆ ಅಭೂತಪೂರ್ವ ಸ್ವಾಗತೋಪಚಾರವನ್ನಿತ್ತು ಅವರನ್ನು ಸಭಾ ಸ್ಥಾನಕ್ಕೆ ಕರೆತಂದರು. ಉಭಯ ಶ್ರೀಗಳವರೂ ಆಸನ ಸ್ವೀಕಾರ ಮಾಡಿ ಪರಸ್ಪರ ಕುಶಲ ಪ್ರಶ್ನೆ ನಡೆಸಿ ಅಪೂರ್ವ ಪರಿಚಯದಿಂದ ಆನಂದ ಮಗ್ನರಾದುದಲ್ಲದೆ ಕಾಮಕೋಟಿ ಶಂಕರಾಚಾರ್ಯರೇ ಅಲ್ಲಿ ಸನ್ನಿಹಿತರಾದ ಪಂಡಿತ ಪ್ರಕಾಂಡರ ಪರಿಚಯವನ್ನು ಶ್ರೀ ಭಂಡಾರಕೇರಿ ಶ್ರೀಪಾದಂಗಳವರಿಗೆ ಮಾಡಿಸಿಕೊಟ್ಟರು.

ಕಾಮಕೋಟಿಯವರೇನೂ ಕಮ್ಮಿಯಾದವರಲ್ಲ ವಿದ್ಯಾಪಾರಂಗತರಾದ ಮಹಾವಿರಕ್ತ ತಪಸ್ವಿಗಳು ತತ್ವವಿಚಾರ ಸಾಗರದಲ್ಲಿ ತೇಲಾಡಿದವರೇ, ಭಂಡಾರಕೇರಿಯವರಂತೂ ತಮ್ಮ ಹೆಸರಿಗೆ ತಕ್ಕದಾಗಿ ನಿಜವಾದ ವಿದ್ಯಾಮಾನ್ಯರೇ, ವೈರಾಗ್ಯದ ತವರುಮನೆ, ಶಾಂತಿಯ ಬೀಡು, ತತ್ವವಿಚಾರ ನಿಷ್ಣಾತರು. ಹೀಗಿರುವಾಗ ಉಭಯ ಶ್ರೀಗಳ ಸಮ್ಮೇಳನವೆಂದರೆ ಅದೊಂದು ಹಾಲಿಗೆ ಸಕ್ಕರೆ ಹಾಕಿದಂತೆಯೇ ಸರಿ. ಇಂತಹ ಸಂಯೋಗಗಳಲ್ಲಿಯೇ ಆದರೆ ಆಗಬೇಕು ತತ್ವನಿರ್ಣಯ. ಅದನ್ನು ಅಪೇಕ್ಷಿಸುವ ಪಂಡಿತರ ಸಮಾಜದಲ್ಲಿಯೇ ಅದು ನಡೆದರೆ ಸಾರ್ಥಕ. ಸಮಾಜವೂ ತತ್ವ ನಿರ್ಧಾರವನ್ನು ಅಪೇಕ್ಷಿಸುತ್ತಿರುವಾಗ ಒಂದು ವಿಚಾರ ವಿನೋದವನ್ನು ನಡೆಯಿಸುವದು ಸಮಯೋಚಿತವೆಂದು ಭಾವಿಸಿ ಕಾಮಕೋಟಿ ಪೀಠದ ಶ್ರೀಪಾದಂಗಳವರು ಭಂಡಾರಕೇರಿ ಶ್ರೀಗಳವರಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡಿದರು.

ಶಂಕರಾಚಾರ್ಯರು— ಶ್ರೀಗಳವರೇ ! ತಾವು ದ್ವೈತಶಾಸ್ತ್ರವನ್ನು ಚೆನ್ನಾಗಿ ವಿಮರ್ಶೆ ಮಾಡಿದ್ದೀರೆಂದು ಕೇಳಿದ್ದೇವೆ. ಅದು ನಿಜವಾಗಿಯೂ ನಿಮ್ಮ ದರ್ಶನದಿಂದ ಮನಸ್ಸಿಗೆ ಮನದಟ್ಟಾಗಿದೆ. ನಮಗೆ ತಮ್ಮ ಮುಖದಿಂದ ಒಂದು ವಿಷಯವನ್ನು ತಿಳಿಯ ಬೇಕೆಂದಿದೆ. ಅದನ್ನು ಪ್ರಸ್ತಾಪಿಸಿದರೆ ತಮಗೇನೂ ಅನ್ಯಥಾಗ್ರಹಣವಾಗಲಾರದಷ್ಟೆ !

ಭಂ. ಶ್ರೀಗಳವರು— ಎಲ್ಲಾದರೂ ಉಂಟೇ ? 'ಆತ್ಮಾವಾರೇ ದ್ರಷ್ಟವ್ಯಃ ಶ್ರೋತವ್ಯಃ ಮಂತವ್ಯಃ ನಿಧಿಧ್ಯಾಸಿತವ್ಯಃ' ಹೀಗೆ ಉಪನಿಷತ್ತುಗಳು ಸಾರುತ್ತಿರುವಾಗ ಸರ್ವದಾ ತತ್ವ ವಿಚಾರವನ್ನೇ ಮನುಷ್ಯನು ಮಾಡುತ್ತಿರಬೇಕು. ಅಂದಮೇಲೆ ನಮ್ಮಂತಹ ಸನ್ಯಾಸಿಗಳಿಗೆ "ತದ್ಧಿ ತಪಸ್ತದ್ಧಿ ತಪಃ" ತಾವಂದುದು ಸೂಕ್ತವೇ. ಅವಶ್ಯವಾಗಿ ತಮ್ಮ ಮನೋಗತವನ್ನು ಮುಂದಿಡೋಣವಾಗಲಿ!- ಅಂದರೆ ತಾವಂದಷ್ಟು ಇಲ್ಲದಿದ್ದರೂ ಯಥೋಚಿತ ನಮ್ಮ ಬುದ್ಧಿಗೆ ತೋರಿದಷ್ಟು ವಿಷಯ ವಿವೇಚಿಸುತ್ತೇವೆ. ಅದೆಲ್ಲಾ ಇಂತಹ ಪಂಡಿತರ ಸನ್ನಿವೇಶದಲ್ಲಿ ಆಗದೆ ಇನ್ನೆಲ್ಲಾಗಬೇಕು ? ಅಲ್ಲದೆ "ಕಾವ್ಯಶಾಸ್ತ್ರ ವಿನೋದೇನ ಕಾಲೋಗಚ್ಛತಿ ಧೀಮತಾಂ"

ಶಂ— ಹೌದು, ಹೌದು, ನಿಜವಾದ ಸಂಗತಿಯನ್ನೇ ಹೇಳಿದಿರಿ. ತುಂಬಾ ಸಂತೋಷ ಸರಿ. ಈಗ "ಅಪ್ರಾಪ್ತೇ ಶಾಸ್ತ್ರಮರ್ಥವತ್" ಅಂದರೆ ಇತರ ಪ್ರಮಾಣಗಳಿಂದ ತಿಳಿಯದ ಒಂದು ಅಪೂರ್ವ ಸಂಗತಿ (ಅರ್ಥ) ಯನ್ನು ತಿಳಿಸಿಕೊಡುವುದರಿಂದ ವೇದಾದಿ ಶಾಸ್ತ್ರಗಳಿಗೆ ಸಾರ್ಥಕ್ಯ. ಅಲ್ಲವೇ ? ಅಂದಮೇಲೆ ವೇದಾದಿ ಶಾಸ್ತ್ರಗಳು ಪಂಚ ಭೇದಾತ್ಮಕವಾದ ದ್ವೈತವನ್ನು ಪ್ರತಿಪಾದಿಸುವದಾದರೆ ಅಪೂರ್ವವಾದ ಅರ್ಥವನ್ನು ಪ್ರತಿಪಾದಿಸಿದಂತಾಗ ಲಾರದು. ಯಾಕಂದರೆ ಶಾಸ್ತ್ರದ ಅಪೇಕ್ಷೆಯಿಲ್ಲದೆ ಈ ದ್ವೈತವು (ಪಂಚಭೇದವು)ಪ್ರತಿಯೊಬ್ಬನ ಅನುಭವದಿಂದಲೇ ತಿಳಿಯಲ್ಪಟ್ಟಿದೆ. ನಾನು ಜಡವಲ್ಲ, ಈಶ್ವರನಲ್ಲವೆಂದು ಯಾರಿಗೆ ಅನುಭವವಿಲ್ಲ ? ಆದಿಶಂಕರಾಚಾರ್ಯರು ಹೇಳುವ ಜೀವ ಬ್ರಹ್ಮೈಕ್ಯವು, ಅನುಭವ ವೇದ್ಯವಾಗದ ಅಪೂರ್ವ ವಿಷಯ. ಇದನ್ನು ವೇದಾದಿ ಶಾಸ್ತ್ರಗಳು ತಿಳಿಸುವದಾದರೆ ಮಾತ್ರ ಅವುಗಳಿಗೆ ಸಾರ್ಥಕ್ಯ ದೊರೆಯುತ್ತದೆ. ಆದ್ದರಿಂದ ವೇದಾದಿ ಶಾಸ್ತ್ರಗಳು ದ್ವೈತ ಪರವಾಗಿರದೆ ಅದ್ವೈತವನ್ನೇ ಪ್ರತಿಪಾದಿಸುತ್ತವೆಯೆಂದು ಅವರು ತಮ್ಮ ಗ್ರಂಥಗಳಲ್ಲಿ ಹೇಳುತ್ತಾರೆ ಈ ವಿಷಯದಲ್ಲಿ ತಮ್ಮ ದ್ವೈತವಾದದಲ್ಲಿ ಏನು ಸಮಾಧಾನ ಹೇಳಿದ್ದಾರೆ.

ಭಂ. ಶ್ರೀಗಳು— ದ್ವೈತ, ಅಂದರೆ- ಪಂಚಭೇದವೆಂದಿರಲ್ಲ, ಅಂದರೆ- ೧ ಜೀವೇಶ್ವರರ ಭೇದ. ೨ ಜೀವಜೀವರ ಭೇದ. ೩ ಜಡೇಶ್ವರಭೇದ, ೪ ಜಡಜಡಭೇದ, ೫ ಜಡಜೀವಭೇದ ಇವೇ ಐದು ಭೇದಕ್ಕೆ ಪಂಚಭೇದವೆನ್ನುತ್ತಾರೆ. ಇದರಲ್ಲಿ ಪ್ರಾಥಮಿಕವಾದ ಜೀವೇಶ್ವರ ಭೇದಕ್ಕೆ ಅಪೂರ್ವತಾ ವಿಚಾರ ಮಾಡೋಣ ಈ ಭೇದವು ಪ್ರತ್ಯಕ್ಷಸಿದ್ಧವಲ್ಲ. ನಮಗೆ ಜೀವೇಶ್ವರರು ಪ್ರತ್ಯಕ್ಷರಾಗದಿರುವದರಿಂದ ಅವರ ಭೇದವೂ ಪ್ರತ್ಯಕ್ಷವಲ್ಲ. 'ಅಹಂ' ಎನ್ನುವ ಅನುಭವವಿರುವದರಿಂದ ಜೀವನು ಅನುಭವಸಿದ್ಧನಾದರೂ ಈಶ್ವರಾನುಭವವಿಲ್ಲದಿರುವುದರಿಂದ ಜೀವೇಶ್ವರ ಭೇದವು ಅನುಭವ (ಪ್ರತ್ಯಕ್ಷ) ಸಿದ್ಧವಾಗಲಾರದು.

ಶಂಕರಾಚಾರ್ಯರು—ಸರಿ. ಭೇದ ತಿಳಿಯಬೇಕಾದರೆ ಜೀವೇಶ್ವರರ ಜ್ಞಾನವಿದ್ದರೆ ಸಾಕು. ಜೀವನ ಅನುಭವ "ಅಹಂ" ಎಂತ ಇದೆ ಯೆಂದು ತಾವೇ ಹೇಳುತ್ತೀರಿ. ಈಶ್ವರನು

ಪ್ರತ್ಯಕ್ಷ ಸಿದ್ಧನಾಗದಿದ್ದರೂ ಅನುಮಾನದಿಂದ ಅವನನ್ನು ತಿಳಿದುಕೊಳ್ಳಲು ಸಾಧ್ಯವಿದೆ. ಯುಕ್ತಿಯಿಂದ ಈಶ್ವರನನ್ನು ಸರ್ವಕರ್ತನೆಂದೂ ಅನುಭವದಿಂದ ಜೀವನು ಸರ್ವಕರ್ತನಲ್ಲ ವೆಂದೂ ಸಿದ್ಧವಾದ ಮೇಲೆ ಅವರೊಳಗಿನ ಭೇದವು ಶಾಸ್ತ್ರಾಪೇಕ್ಷೆಯಿಲ್ಲದೇನೇ ತಿಳಿಯ ಲ್ಪಟ್ಟಂತಾಯಿತಲ್ಲವೆ ? ಆದ್ದರಿಂದ ಭೇದ ಅಥವಾ ದ್ವೈತಪ್ರಪಂಚವನ್ನು ತಿಳಿಸಲು ಶಾಸ್ತ್ರವು ಪ್ರವೃತ್ತನಾಗಲಾರದು. (ಅಥವಾ ಭೇದಕ್ಕೆ ಅಪೂರ್ವತೆಯಿಲ್ಲ.)

ಭಂ ಶ್ರೀಗಳು— ಯುಕ್ತಿಯಿಂದ ಈಶ್ವರನು ಸಿದ್ಧನಾದರೆ ಶ್ರೀಗಳವರಂದದ್ದು ಸರಿ ಆವೇ ಸ್ವಲ್ಪವಿಚಾರಣೀಯ. "ನೈಷಾ ತರ್ಕೇಣ ಮತಿರಾಪನೇಯಾ" "ಶಾಸ್ತ್ರಯೋನಿತ್ವಾತ್" ಇತ್ಯಾದಿ ಶ್ರುತಿಸೂತ್ರಗಳಲ್ಲಿ ಈಶ್ವರನು ಕೇವಲ ಸಚ್ಛಾಸ್ತ್ರಗಳಿಂದಲೇ ಜ್ಞೇಯನಲ್ಲದೆ ತರ್ಕ (ಯುಕ್ತಿ) ಗಳಿಂದ ತಿಳಿಯಲ್ಪಡತಕ್ಕವನಲ್ಲವೆಂದು ನಿರ್ಣಯಿಸಿದ್ದಾರೆ. ಶ್ರೀ ಶಂಕರಾ ಚಾರ್ಯರೂ ಈ ವಿಷಯದಲ್ಲಿ ಇಂತಹ ಶ್ರುತಿಸೂತ್ರಗಳಿಗೆ ನಾವಂದ ಅಭಿಪ್ರಾಯವನ್ನೇ ವ್ಯಕ್ತಮಾಡಿದ್ದಾರೆ. ಹೀಗಾದುದರಿಂದ ಯುಕ್ತಿಯಿಂದ ಈಶ್ವರನ ಜ್ಞಾನ ಉಂಟಾಗಲಾರದು. ಇವಕ್ಕಾಗಿ ಶಾಸ್ತ್ರಗಳೇ ಅವಶ್ಯವಾಗಿವೆ.

ಶಂಕರಾಚಾರ್ಯರು— ಸರಿ. ಜೀವೇಶ್ವರರ ಭೇದವಿರಲಿ. ಇನ್ನುಳಿದ ಭೇದಗಳಿಗೆ ಅಪೂರ್ವತ್ವ ವಿಚಾರ ನಡೆಸೋಣ. ಜೀವರ ಪರಸ್ಪರ ಭೇದ ಅನುಭವವೇದ್ಯವಲ್ಲವೆ ?

ಭಂ. ಶ್ರೀಗಳು— ಇಲ್ಲ, ಇಲ್ಲ. ಈಗ ದೇಹ ಬೇರೆ, ಅದರೊಳಗಿರುವ ಜೀವರು ಬೇರೆ. ಅನೇಕ ದೇಹಗಳು ನಮಗೆ ಪ್ರತ್ಯಕ್ಷಸಿದ್ಧವಾದರೂ ಆ ದೇಹದ ಒಳಗಡಗಿರುವ ಜೀವರು ನಮಗೆ ಪ್ರತ್ಯಕ್ಷಸಿದ್ಧರಲ್ಲ. (ಅವರ ಪ್ರತ್ಯಕ್ಷ ನಮಗಿಲ್ಲ). ಎಲ್ಲಾ ಜೀವರುಗಳೇ ಪ್ರತ್ಯಕ್ಷ ಸಿದ್ಧರಾಗದಿರುವಾಗ ಅವರೊಳಗಿನ ಭೇದವು ನಮಗೆ ಪ್ರತ್ಯಕ್ಷ ಸಿದ್ಧವಾಗುವುದು ಹೇಗೆ ?

ಶಂಕರಾಚಾರ್ಯರು— ಜಡಗಳೆಲ್ಲಾ ಪ್ರತ್ಯಕ್ಷ ಸಿದ್ಧಗಳಾದುದರಿಂದ ಅವುಗಳ ಭೇದವು ಪ್ರತ್ಯಕ್ಷಸಿದ್ಧವೇ ಆದಕಾರಣ ಜಡಭೇದಕ್ಕೆ ಅಪೂರ್ವತೆ ಇಲ್ಲದಿರುವುದರಿಂದ ಅದನ್ನು ಶಾಸ್ತ್ರದಲ್ಲಿ ಹೇಳುವುದು ಅನಾವಶ್ಯಕವಷ್ಟೆ ?

ಭಂ. ಶ್ರೀಗಳು— ಜಡಗಳೆಂದರೆ ನಮಗೆ ತೋರುವವುಗಳೇ ಮಾತ್ರವಲ್ಲ. ನಮ್ಮ ಪ್ರತ್ಯಕ್ಷಕ್ಕೆ ಸಿಲುಕದ ಅಪಾರ ಅಥವಾ ಲೆಖ್ಖವಿಲ್ಲದಷ್ಟು ಜಡವಸ್ತುಗಳಿವೆ ಹದಿನಾಲ್ಕು ಲೋಕದಲ್ಲಿರುವ ಜಡವಸ್ತುಗಳು ಸರ್ವಜ್ಞನೊಬ್ಬನಿಂದ ಮಾತ್ರ ತಿಳಿಯಲ್ಪಡತಕ್ಕವು ಪುಣ್ಯ ಪಾಪಾದಿಗಳು ಅತೀಂದ್ರಿಯ ಜಡವಸ್ತುಗಳು ಆದ್ದರಿಂದ ಅವುಗಳ ಭೇದವಂತೂ ಶಾಸ್ತ್ರಾ ಪೇಕ್ಷೆಯಿಲ್ಲದೆ ತಿಳಿಯಲು ಸಾಧ್ಯವೇ ಇಲ್ಲ. ಹೀಗೆ ಪಂಚ ಭೇದಾತ್ಮಕವಾದ ದ್ವೈತವು ಶಾಸ್ತ್ರವನ್ನು ಬಿಟ್ಟರೆ ಇತರ ಯಾವ ಪ್ರಮಾಣಗಳಿಂದಲೂ ತಿಳಿಯಲಸಾಧ್ಯವಾದ್ದರಿಂದ ಅದಕ್ಕೆ ಅಪೂರ್ವತೆ ಇದೆ. ಆದುದರಿಂದಲೇ ದ್ವೈತವು ಶಾಸ್ತ್ರಗಳ ಮುಖ್ಯ ತಾತ್ಪರ್ಯ ವಿಷಯವಾಗಿದೆ, ಎಂದು ನಮ್ಮ ಸಿದ್ಧಾಂತದಲ್ಲಿ ಸಮರ್ಥನೆ ಮಾಡಿದ್ದಾರೆ. ಅದನ್ನು ಪರಾಮರ್ಶೆ ಮಾಡಿದರೆ ಸ್ವತಃ ಸಮಾಧಾನವಾಗುವದರಲ್ಲಿ ಸಂದೇಹವಿಲ್ಲ.

ಶಂಕರಾಚಾರ್ಯರು— ವಾಕ್ಯಾರ್ಥ ಗೋಷ್ಠಿಯೆಂದರೆ ಪಂಡಿತರಿಗೆ ಆದೊಂದು ಹಬ್ಬವಂತೆ,

ಆದ್ದರಿಂದ ನಮ್ಮ ಪಂಡಿತರೂ ಕೆಲವರು ಮಾತನಾಡಲು ಉತ್ಸಾಹಿಗಳಾಗಿರಬಹುದು.

ಭಂ. ಶ್ರೀಗಳು— ತುಂಬಾ ಸಂತೋಷ ! ವಿದ್ಯಾಶೀಲರಿಗೆ ಅದರಲ್ಲಿಯೇ ವಿನೋದ ಆಗಬಹುದು. ತನ್ನಿಚ್ಛೆಯನ್ನು ನಾವು ಆತಂಕಪಡಿಸುವದಿಲ್ಲ. ಮಾತನಾಡುವ ವಿದ್ಯಾವಂತರಿಗೆ ತಾವೇ ಆಜ್ಞೆ ಮಾಡಿದರಾಯಿತು.

ಶಂಕರಾಚಾರ್ಯರು— ಅನಂತಕೃಷ್ಣ ಶಾಸ್ತ್ರಿಗಳೇ ! ಈ ವಿಷಯವನ್ನು ಮುಂದುವರಿಸಿ ಮಾತನಾಡಿರಿ. (ಭಂಡಾರಕೇರಿ ಶ್ರೀಗಳವರ ಮುಖ ನೋಡಿ) ಶ್ರೀಗಳವರಿಗೆ ಇವರ ಪರಿಚಯವಿರಬಹುದಷ್ಟೇ !

ಭಂ. ಶ್ರೀಗಳು– ಇದೆ. ಇವರು ಮಹಾಮಹೋಪಾಧ್ಯಾಯರೆಂಬ ಬಿರುದಾಂಕಿತರಲ್ಲವೇ! ಹಿಂದೆ ಕಲ್ಕತ್ತೆಯಲ್ಲಿರುವಾಗ ನಮ್ಮ ದ್ವೈತಮತದ ಚಂದ್ರಿಕಾದಿ ಗ್ರಂಥವನ್ನು ಆಗಾಗ ವಿಮರ್ಶೆ ಮಾಡುತ್ತಿದ್ದರು. ಲೌಕಿಕ ವೈದಿಕ ಉಭಯ ನಿಷ್ಣಾತರು. ನಮ್ಮ ಉಡುಪಿಗೂ ಬಂದಿದ್ದಾರೆ. ಈ ಹಿಂದೆ ನಮ್ಮೊಳಗೆ ಹಲವಾರು ಸಲ ವಾಗ್ವಿನೋದಗಳು ನಡೆದಿರಲು ಇವರ ಪರಿಚಯವಿರಲಾರದೇ ? ಶಾಸ್ತ್ರಿಗಳೇ ಶ್ರೀಗಳವರಂದಂತೆ ಈ ವಿಷಯದಲ್ಲಿ ನಿಮ್ಮ ಅಭಿಪ್ರಾಯವನ್ನು ಮಂಡಿಸಬಹುದು.

ಅನಂತಕೃಷ್ಣ ಶಾ.— " ನೇಹ ನಾನಾಸ್ತಿ ಕಿಂಚನ " ಎಂಬ ಅದ್ವೈತವನ್ನು ಹೇಳುವ ಶ್ರುತಿವಾಕ್ಯವು ದ್ವೈತ ನಿಷೇಧವನ್ನು ಮಾಡುತ್ತದೆ. ಪೂರ್ವ ಮೀಮಾಂಸಾ ಶಾಸ್ತ್ರದಲ್ಲಿ ವಿಧಿವಾಕ್ಯಕ್ಕಿಂತ ನಿಷೇಧಕ ವಾಕ್ಯವು ಪ್ರಬಲವೆಂದು ಸಾಧಿಸಿರುವುದರಿಂದ ದ್ವೈತಾದ್ವೈತ ವಾಕ್ಯಗಳ ನಡುವೆ ವಿಧಾಯಕ ದ್ವೈತವಾಕ್ಯಗಳಿಗಿಂತ ದ್ವೈತನಿಷೇಧಕಗಳಾದ ಅದ್ವೈತ ವಾಕ್ಯಗಳೇ ಪ್ರಬಲವಾಗಿರುತ್ತವೆ. ಆದ್ದರಿಂದ ವೇದಾದಿ ಶಾಸ್ತ್ರಗಳಿಗೆ ಅದ್ವೈತದಲ್ಲಿಯೇ ಮುಖ್ಯ ತಾತ್ಪರ್ಯವಿರುವುದು ಉಚಿತ.

ಭಂ. ಶ್ರೀಗಳು— ಶಾಸ್ತ್ರಿಗಳೇ ! ಕೇಳಬೇಕು. ಈ ಪೂರ್ವ ಮೀಮಾಂಸಾ ನ್ಯಾಯದಂತೆ ಹೇಳತೊಡಗಿದರೆ ಶೂನ್ಯವನ್ನು ಹೇಳುವ ವಾಕ್ಯದ ಆಧಾರದಿಂದ, ಬ್ರಹ್ಮನಿಲ್ಲವೆಂದೇ ವೇದಕ್ಕೆ ಮುಖ್ಯ ತಾತ್ಪರ್ಯವೆಂದೇಕೆ ಹೇಳಬಾರದು ? ನೋಡಿ. "ಸದೇವ ಸೌಮ್ಯೇದಮಗ್ರ ಆಸೀತ್" ಎಂದು ಜಗತ್ಸೃಷ್ಟಿಯ ಮೊದಲು ಬ್ರಹ್ಮನಿದ್ದನೆಂದು ಹೇಳುವ ವೇದ ವಾಕ್ಯವು ವಿಧಿರೂಪವಾದದ್ದು. "ನೈವೇಹ ಕಿಂಚನಾಗ್ರ ಆಸೀತ್" ಎಂದು ಜಗತ್ಸೃಷ್ಟಿಯ ಮೊದಲು ಏನೂ ಇರಲಿಲ್ಲವೆಂದು ಹೇಳುವ ವಾಕ್ಯವು ಬ್ರಹ್ಮನನ್ನೂ ನಿಷೇಧ ಮಾಡುತ್ತಾ ಶೂನ್ಯವನ್ನೇ ಹೇಳುತ್ತದೆ. ನೀವಂದ ನ್ಯಾಯದಂತೆ ಈಗ ಶೂನ್ಯವನ್ನು ಪ್ರತಿಪಾದಿಸುವ ವಾಕ್ಯಾಧಾರದಿಂದ ಬ್ರಹ್ಮನನ್ನು ಇಲ್ಲವೆಂದು ಹೇಳಬಹುದಷ್ಟೆ ! ಶೂನ್ಯವನ್ನೇ ತತ್ವವೆಂದೂ ಒಪ್ಪಬೇಕಾದೀತು. ಈ ಆಪಾದನೆಯನ್ನು (ದೋಷವನ್ನು) ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರೆಂಬ ದ್ವೈತಮತಪ್ರತಿಷ್ಠಾಪಕರು ತಮ್ಮ ಶ್ರೀವಿಷ್ಣು ತತ್ವನಿರ್ಣಯವೆಂಬ ಗ್ರಂಥದಲ್ಲಿ ತುಂಬಾ ಸುರಸವಾಗಿ ಪ್ರತಿಪಾದಿಸಿದ್ದಾರೆ.

ಅನಂತಕೃಷ್ಣ ಶಾ.— "ನೈವೇಹ ಕಿಂಚನಾಗ್ರ ಆಸೀತ್" ಈ ಶ್ರುತಿಯು ಶೂನ್ಯವನ್ನು ಪ್ರತಿಪಾದಿಸುವದು ಹೇಗೆ ? ಶ್ರುತಿಯಲ್ಲಿರುವ 'ಅಗ್ರೇ' ಎಂಬ ಪದವು ಸೃಷ್ಟಿಯ ಪೂರ್ವಕಾಲವನ್ನು ಹೇಳುತ್ತದೆ. ಕಾಲವೆಂಬ ಒಂದು ವಸ್ತುವನ್ನು ಹೇಳಿದ ಮೇಲೆ

ಈ ಶ್ರುತಿಯು ಸರ್ವಶೂನ್ಯವನ್ನು ಪ್ರತಿಪಾದಿಸಲಾರದು. ಅಯುಕ್ತವೂ ಆಗುತ್ತದೆ.

ಭಂ. ಶ್ರೀಗಳು— ಅದು ಹೌದು. " ಸದೇವ ಸೌಮ್ಯೇದಮಗ್ರ ಆಸೀತ್ ' ಏಕಾಮೇವಾದ್ವಿತೀಯಂ ಎಂಬ ಅದ್ವೈತವನ್ನು ಹೇಳುವ ವಾಕ್ಯದಲ್ಲಿಯೂ " ಅಗ್ರೇ " ಎಂಬ ಪದವಿದೆ. ಈ ಪದವೂ ಸೃಷ್ಟಿಯ ಪೂರ್ವಕಾಲವನ್ನೇ ಹೇಳುತ್ತದೆ. ಅದ್ವೈತವೆಂದರೆ ಬ್ರಹ್ಮನಿಂದ ಬೇರೆ ಯಾವ ವಸ್ತುವೂ ಇಲ್ಲವೆಂದಭಿಪ್ರಾಯವಷ್ಟೇ ? ಪ್ರಕೃತ ಈ ವಾಕ್ಯವು ಬ್ರಹ್ಮಾತಿರಿಕ್ತವಾದ ಕಾಲವನ್ನು ಹೇಳುತ್ತದೆ ಎಂದ ಮೇಲೆ ಈ ವಾಕ್ಯವು ಅದ್ವೈತ (ಜೀವ ಬ್ರಹ್ಮೈಕ್ಯ) ಪ್ರತಿಪಾದಕವೆಂದು ಅದ್ವೈತಿಗಳು ಹೇಗೆ ಹೇಳುತ್ತಾರೆ. ನೀವಾದರೂ ಏನು ಸಮಾಧಾನವನ್ನು ಮಾಡಿಕೊಂಡಿರುವಿರಿ ?

ಅನಂತಕೃಷ್ಣ ಶಾಸ್ತ್ರಿಗಳು— ಅದು ಲೋಕಪ್ರಸಿದ್ಧವಾದ ಕಾಲವನ್ನು ಅನುವಾದ ಮಾಡಿವೆ ಹೊರತು ಕಾಲವಿದೆಯೆಂದು ವಿಧಾನ ಮಾಡಿದುದಲ್ಲ. ಕಾಲವನ್ನು ಶ್ರುತಿಯು ವಿಧಿಸಿದ್ದರೆ ಅದ್ವೈತವಾದಕ್ಕೆ ಸ್ವಲ್ಪ ಬಾಧಕವಾಗುತ್ತಿತ್ತು. ಲೋಕದವರು ಹೇಳುತ್ತಾರಲ್ಲಾ ! ಕಾಲ ಕಾಲವೆಂದು ಅದನ್ನೇ ಅನುವಾದ ಮಾಡಿದುದರಿಂದ ಅದ್ವೈತ ಶ್ರುತಿಗೆ (ಸದೇವ ಸೌಮ್ಯೇದ ಮಗ್ರೇ) ಎಂಬ ಶ್ರುತಿಗೆ ಏನೂ ಬಾಧಕವಿಲ್ಲ.

ಭಂ. ಶ್ರೀಗಳು— ಈ ಸಮಾಧಾನವನ್ನು ನಮಗೆ ನೀವೇ ಹೇಳಿಕೊಟ್ಟಂತಾಯಿತಲ್ಲವೇ? ನೈವೇಹ ಕಿಂಚನಾಗ್ರೇ ಎಂಬ ಶೂನ್ಯ ಪ್ರತಿಪಾದಕ ವಾಕ್ಯವೂ ಲೋಕಸಿದ್ಧ ಕಾಲವನ್ನೇ ಅನುವಾದ ಮಾಡಿರುವದರಿಂದ ಅದಕ್ಕೆ ಕಾಲವಿಧಾನ ಮಾಡುವದರಲ್ಲಿ ತಾತ್ಪರ್ಯವಿರದೆ ಸರ್ವವನ್ನೂ ನಿಷೇಧ ಮಾಡುವುದರಲ್ಲಿಯೇ ಮುಖ್ಯ ತಾತ್ಪರ್ಯವೆಂದು ಸಿದ್ಧವಾಗುವದರಲ್ಲಿ ಅಡ್ಡಿಯೇನಿದೆ ?

ಕಾ. ಶಂಕರಾಚಾರ್ಯರು— ಅನಂತಕೃಷ್ಣ ಶಾಸ್ತ್ರಿಗಳೇ, ಪಂಡಿತರನೇಕರಿರುವಾಗ ಒಬ್ಬರೇ ಹೆಚ್ಚು ಸಮಯವನ್ನು ತೆಗೆದುಕೊಂಡರೆ ಮುಂದಿನವರಿಗೆ ತೀರಾ ಸಮಯವು ಸಂಕ್ಷಿಪ್ತವಾಗುವುದಿಲ್ಲವೇ ? ಈಗ ಪ್ರಧಾನ ಪಂಡಿತರಾದ ಸುಬ್ರಹ್ಮಣ್ಯ ಶಾಸ್ತ್ರಿಗಳು ಸ್ವಲ ಮಾತಾಡಲಿ. ಆಗದೇ ?

ಅನಂತಕೃಷ್ಣ ಶಾಸ್ತ್ರಿಗಳು— ಶ್ರೀಗಳ ಅಪ್ಪಣೆ ಆಗಲಿ, ಹಾಗೇ ಆಗಲಿ.

ಕಾ. ಶಂಕರಾಚಾರ್ಯರು— ಸುಬ್ರಹ್ಮಣ್ಯ ಶಾಸ್ತ್ರಿಗಳೇ ! ಈ ವಿಷಯದಲ್ಲಿ ನಿಮ್ಮ ಅಭಿಪ್ರಾಯವೂ ಸ್ವಲ್ಪಹೊರಬೀಳಲಿ. ಶ್ರೀಗಳವರ ಆಕ್ಷೇಪಕ್ಕೆ ಏನು ಸಮಾಧಾನ ಹೇಳುವಿರಿ ?

ಸುಬ್ರಹ್ಮಣ್ಯ ಶಾಸ್ತ್ರಿಗಳು— ಮಹಾಮಹೋಪಾಧ್ಯಾಯರ ಮಾತಿನ ಮೇಲೆ ನಮ್ಮ ಮಾತಿಲ್ಲ. ಆದರೂ ಶ್ರೀಗಳ ಆಜ್ಞೆಯಂತೆ ನಾನು ತಿಳಿದಿರುವುದನ್ನು ವಿಜ್ಞಾಪಿಸಿ ಕೊಳ್ಳುತ್ತೇನೆ. ನೈವೇಹ ಕಿಂಚನಾಗ್ರೇ ಎಂಬ ವಾಕ್ಯವು ಸರ್ವವನ್ನೂ ನಿಷೇಧಮಾಡುತ್ತದೆ ಎಂದು ಉಡುಪಿ ಶ್ರೀಗಳು ಅಂದಿದ್ದಾರೆ. ಸರ್ವನಿಷೇಧವನ್ನು ಎಲ್ಲಿ ಮಾಡುವುದು ? ನಿಷೇಧಕ್ಕೊಂದು ಅಧಿಕರಣ ಬೇಡವೇ ? ಅದನ್ನು "ಇಹ"ವೆಂಬ ಶಬ್ದವು ಹೇಳುತ್ತದೆ. ಈ ಅಧಿಕರಣ ವಸ್ತುವನ್ನು ಉಂಟೆಂದು ಒಪ್ಪಿದರೆ, ಸರ್ವ ನಿಷೇಧ ಮಾಡುವಂತಿಲ್ಲ. ಅಧಿಕರಣವನ್ನು ಅಂಗೀಕರಿಸದಿದ್ದರೆ (ಒಪ್ಪದಿದ್ದರೆ) ನಿಷೇಧ ಜ್ಞಾನಕ್ಕೆ ಅಧಿಕರಣ ಜ್ಞಾನವು ಕಾರಣವಾಗಿರುವದರಿಂದ ಸರ್ವ ನಿಷೇಧ ಮಾಡುವಂತೆಯೂ ಇಲ್ಲ.

ಭಂ. ಶ್ರೀಗಳು--- ಶ್ರುತಿಯಲ್ಲಿ "ಇಹ" ಎಂಬ ಶಬ್ದ ಪ್ರಯೋಗ ಮಾಡಿರುವದರಿಂದ ಸರ್ವ ನಿಷೇಧವನ್ನು ಈ ಶ್ರುತಿಯು ಮಾಡಲಾರದೆಂದು ಪ್ರಧಾನ ಪಂಡಿತರು ಅಭಿಪ್ರಾಯ ಪಡುತ್ತಾರೆ. ಸರ್ವ ನಿಷೇಧಕ್ಕೆ ಅಧಿಕರಣವಾದದ್ದು ಸರ್ವನಿಷೇಧರೂಪವಾದ ಶೂನ್ಯವೆಂದೇ ನಾವು ಹೇಳುತ್ತೇವೆ. ಇಹವೆಂಬ ಶಬ್ದವು ಆ ಶೂನ್ಯವನ್ನೇ ಅಧಿಕರಣವನ್ನಾಗಿ ಹೇಳುತ್ತದೆ. ಭೂತಲದಲ್ಲಿರತಕ್ಕ ಘಟನಿಷೇಧ ಭೂತಲ ಸ್ವರೂಪವೆಂದು ಮೀಮಾಂಸಕರು ಹೇಳುತ್ತಾರೆ. ಹಾಗೂ ಅದ್ವೈತಿಗಳು ಬ್ರಹ್ಮನಲ್ಲಿರತಕ್ಕ ಜೀವೈಕ್ಯವು ಬ್ರಹ್ಮ ಸ್ವರೂಪವೆಂದು ಹೇಳುತ್ತಾರೆ ಐಕ್ಯವನ್ನು ಬ್ರಹ್ಮಾತಿರಿಕ್ತವೆಂದರೆ ಅದು ಮಿಥ್ಯೆಯೆಂದೂ ಹೇಳಬೇಕಾಗುತ್ತದೆ. ಬ್ರಹ್ಮ ಒಂದೇ ಸತ್ಯ ಅವನಿಂದ ಅತಿರಿಕ್ತವಾದುವೆಲ್ಲಾ ಸುಳ್ಳು (ಮಿಥ್ಯಾ)ಎಂದು ಅದ್ವೈತ ಸಿದ್ಧಾಂತ ಯಾಕೆ ಹೇಳುತ್ತೇವೆಂದರೆ, ಭೂತಲದಲ್ಲಿರತಕ್ಕ ಘಟನಿಷೇಧವು ಭೂತಲ ಸ್ವರೂಪವಾದಂತೆ, ಬ್ರಹ್ಮನಲ್ಲಿರತಕ್ಕ ಐಕ್ಯವು ಬ್ರಹ್ಮಸ್ವರೂಪವಾದಂತೆ, ಶೂನ್ಯದಲ್ಲಿರತಕ್ಕ ಸರ್ವ ನಿಷೇಧವು ಶೂನ್ಯ ಸ್ವರೂಪವೇ ಎಂದು ಹೇಳಿದರೇನು ಬಾಧಕ ? ಶೂನ್ಯ ರೂಪಾಧಿಕರಣವಿರುವದರಿಂದ ನೈವೇಹವೆಂಬ ಶ್ರುತಿಯು ಸರ್ವನಿಷೇಧಕವಾಗಬಹುದಷ್ಟೆ? ಶಾಸ್ತ್ರಿಗಳು ಅಧಿಕರಣದ ಮಟ್ಟಿಗೆ ಆಕ್ಷೇಪಿಸಿದ್ದು. ನಾವು ಶೂನ್ಯವನ್ನೇ ನಿಷೇಧಕ್ಕೆ ಅಧಿಕರಣವೆಂದು ತೋರಿಸಿದ್ದೇವೆ.

ಅನಂತಕೃಷ್ಣ ಶಾಸ್ತ್ರಿಗಳು— ಮಧ್ಯೆ ಒಂದು ಸ್ಮೃತವಾಯಿತು. ಸ್ವಲ್ಪ ಅವಕಾಶ ದೊರೆಯಬೇಕು.

ಉಭಯ ಶ್ರೀಗಳು— ಆಗಲಿ. ಅದಕ್ಕೇನು ? ಹೇಳಿರಿ.

ಅನಂ. ಶಾಸ್ತ್ರಿಗಳು— ಶೂನ್ಯವಾದಿಗಳಾದ ಬೌದ್ಧರು ಶೂನ್ಯವನ್ನು ನಿಷೇಧಸ್ವರೂಪವೆಂದು ಹೇಳುವದಿಲ್ಲ. " ಚತುಷ್ಕೋಟಿ ವಿನಿರ್ಮುಕ್ತಂ " ಅಂದರೆ ಭಾವತ್ವ ಅಭಾವತ್ವಾದಿ ನಾಲ್ಕು ಕೋಟಿಗಳು ಶೂನ್ಯದಲ್ಲಿ ಇಲ್ಲವೆಂದು ಅವರ ಗ್ರಂಥದಲ್ಲಿ ಹೇಳುತ್ತಾರೆ.

ಭಂ. ಶ್ರೀಗಳು— ' ಬ್ರಹ್ಮವಿದ್ಯಾಭರಣ 'ವೆಂದು ಒಂದು ಅದ್ವೈತ ಗ್ರಂಥ. ಇದರಲ್ಲಿ ಬ್ರಹ್ಮ ಸ್ವರೂಪವನ್ನು ವಿಚಾರ ಮಾಡತೊಡಗಿ ಬ್ರಹ್ಮನು ಅಭಾವ ಸ್ವರೂಪವೆಂದು ಅಂಗೀಕರಿಸಿದರೆ ಬ್ರಹ್ಮನೂ ಶೂನ್ಯವೂ ಒಂದೇ ಎಂದು ಶಂಕಿಸಲು ಅವಕಾಶ ದೊರೆಯುತ್ತಿತ್ತು ಬ್ರಹ್ಮನನ್ನು ಭಾವ ರೂಪವೆಂದು ಅದ್ವೈತಿಗಳು ಒಪ್ಪಿರುವದರಿಂದ (ಹೇಳುವದರಿಂದ) ಅದ್ವೈತಿಗಳು ಅಂಗೀಕರಿಸಿದ ಬ್ರಹ್ಮನು ಶೂನ್ಯ ರೂಪವೇ ಆಗಿದೆ ಎಂದು ಹೇಳಲು ಅವಕಾಶವಿಲ್ಲವೆಂದು ಬರೆದಿರುತ್ತಾರೆ. ಈ ಮಾತಿನಿಂದ ಕೆಲವು ಬೌದ್ಧರು ಶೂನ್ಯವನ್ನು ನಿಷೇಧ ಸ್ವರೂಪವೆಂದು ಅಂಗೀಕರಿಸಿದಂತೆ ಅಭಿಪ್ರಾಯವಾಗುತ್ತದೆ. ಶಾಸ್ತ್ರಿಗಳೇ, ಒಂದು ವೇಳೆ ಪ್ರಾಚೀನ ಸರ್ವ ಬೌದ್ಧರು ಅದನ್ನು ಒಪ್ಪದೇ ಹೋಗಲಿ. ನವೀನ ಶೂನ್ಯವಾದಿಗಳು ಸರ್ವ ನಿಷೇಧ ರೂಪವಾದ ಶೂನ್ಯವನ್ನು ಹೇಳುತ್ತದೆಯೆಂದು ಹೇಳತೊಡಗಿದಾಗ ನಿಮ್ಮಿಂದ ಏನಾದರೊಂದು ಉತ್ತರ ದೊರೆಯಬೇಕಲ್ಲ !

ಶಂ. ಆಚಾರ್ಯರು— ಸುಂದರ ಶಾಸ್ತ್ರಿಗಳೇ, ನೀವೀಗ ಈ ವಿಷಯವನ್ನು ಮುಂದುವರಿಸಬೇಕು. ಶ್ರೀಗಳವರಿಗೆ ಇವರ ಪರಿಚಯವನ್ನು ಹಿಂದೆ ಮಾಡಿಸಿಲ್ಲ. ಇವರು ಮಹಾಪಂಡಿತರೆಂಬ ಬಿರುದು ಪಡೆದಿರುತ್ತಾರೆ. ಅದ್ವೈತ ಸಿದ್ಧಾಂತವನ್ನು ಚೆನ್ನಾಗಿ ವಿಮರ್ಶೆ ಮಾಡಿದವರು.

ಭಂ. ಶ್ರೀಗಳು— ಸುಂದರ ಶಾಸ್ತ್ರಿಗಳೇ, ನಿಮ್ಮ ಅಭಿಪ್ರಾಯವನ್ನು ವ್ಯಕ್ತಗೊಳಿಸಿರಿ. ಕ್ಷತ್ರಿಯರಿಗೆ ಸ್ವಯಂವರವಿರುವಂತೆ ಪಂಡಿತರುಗಳಿಗೆ ವಾಕ್ಯಾರ್ಥ ಗೋಷ್ಠಿಯೆಂದರೆ,

ಸುಂದರ ಶಾಸ್ತ್ರಿಗಳು— ಈ ಸನ್ನಿವೇಶದಲ್ಲಿ ನಮಗೆ ಅವಕಾಶ ದೊರಕಿಸಿಕೊಟ್ಟದ್ದೇ ನಮ್ಮ ಪರಮಭಾಗ್ಯ. ಪರಮ ಧನ್ಯನಾದೆ. ಈಗ ಪ್ರಸ್ತುತ ‘ನೈವೇಹ ಕಿಂಚನಾಗ್ರೇ’ ಎಂಬ ವೇದವಾಕ್ಯವು ಶೂನ್ಯದಲ್ಲಿ ಸರ್ವನಿಷೇಧ ಮಾಡಬೇಕಾದರೆ ಶೂನ್ಯದಲ್ಲಿ ಸರ್ವವೂ ಇವೆ, ಎಂದು ಪ್ರಸಕ್ತಿಯಿರಬೇಕಷ್ಟೆ. ದೃಷ್ಟಾಂತಕ್ಕಾಗಿ ಹೇಳುತ್ತೇನೆ. ಶುಕ್ತಿ (ಮುತ್ತಿನಚಿಪ್ಪಿ) ಯನ್ನು ಕಂಡು ಬೆಳ್ಳಿಯೆಂದು ಭ್ರಮಿಸಿದಾಗ ಮಾತ್ರ ಇಲ್ಲಿ ಬೆಳ್ಳಿಯಿಲ್ಲ. ಅಥವಾ ಇದು ಬೆಳ್ಳಿಯಲ್ಲವೆಂದು ಯಾರಿಗಾದರೂ ಹೇಳಲು ಅವಕಾಶವಾಗುತ್ತದೆ. ಬೆಳ್ಳಿ ಇಲ್ಲಿದೆ ಎಂದು ಪ್ರಸಕ್ತಿಯೇ ಇಲ್ಲದಿದ್ದಾಗ ಇದು ಬೆಳ್ಳಿಯಲ್ಲವೆಂದಾಗಲೀ, ಇಲ್ಲಿ ಬೆಳ್ಳಿಯಿಲ್ಲ ವೆಂದಾಗಲೀ ಯಾರೂ ಹೇಳುವದಿಲ್ಲ ಇದರಂತೆ ಪ್ರಕೃತ ಶೂನ್ಯದಲ್ಲಿ ಸರ್ವವೂ ಇವೆ ಎಂಬ ಭ್ರಮೆ ಇದ್ದರೆ ತಾವು ಉದಾಹರಿಸಿದ ‘ನೈವೇಹ’ವೆಂಬ ವಾಕ್ಯವು ಶೂನ್ಯದಲ್ಲಿ ಏನೂ ಇಲ್ಲವೆಂದು ನಿಷೇಧಿಸಬಹುದು. ಈ ಭ್ರಮೆಯು ಯಾರಿಗೂ ಇಲ್ಲದ ಕಾರಣ ಅನಾವಶ್ಯಕ ನಿಷೇಧ ಮಾಡಿದರೆ ಅಪ್ರಸಕ್ತ ನಿಷೇಧವೆಂಬ ಒಂದು ದೋಷವನ್ನು ಆಪಾದಿಸ ಬೇಕಾಗುತ್ತದೆ, ಎಂದು ನನಗೆ ತೋರುತ್ತದೆ.

ಶಂ. ಆಚಾರ್ಯರು— ಸುಂದರ ಶಾಸ್ತ್ರಿಗಳು ಆಪಾದಿಸಿದ ದೋಷ ಸರಿಯಷ್ಟೆ ?

ಭಂ. ಶ್ರೀಗಳು— ಅವರು ಅದ್ವೈತವನ್ನು ಚೆನ್ನಾಗಿ ವಿಮರ್ಶೆ ಮಾಡಿದುದರಿಂದ ಈ ದೋಷವನ್ನು ಸುಲಭವಾಗಿ ಆಪಾದಿಸಿದರು. ಅದ್ವೈತ ಮತದಲ್ಲಿಯೂ ಈ ದೋಷವು ಎತ್ತಿ ತೋರುತ್ತದೆ. ಶ್ರೀಗಳವರು ವಿಮರ್ಶಿಸಬೇಕು. ‘ನೇಹ ನಾನಾಸ್ತಿ ಕಿಂಚನ’ ಈ ಶ್ರುತಿ ವಾಕ್ಯವು ನಿರ್ಗುಣ ಬ್ರಹ್ಮನಲ್ಲಿ ಈ ಪ್ರಪಂಚವಿಲ್ಲವೆಂದು ನಿಷೇಧ ಮಾಡುತ್ತದೆಯೆಂದು ಅದ್ವೈತಿಗಳು ಹೇಳುತ್ತಾರೆ. ನಿರ್ಗುಣ ಬ್ರಹ್ಮನಲ್ಲಿ ಪ್ರಪಂಚವಿದೆಯೆಂದು ಪ್ರಸಕ್ತವಾಗಿಲ್ಲ ನಿರ್ಗುಣನು ಅಪ್ರತ್ಯಕ್ಷನಾದುದರಿಂದ ಅವನಲ್ಲಿ ಪ್ರತ್ಯಕ್ಷದಿಂದ ಪ್ರಪಂಚವು ಪ್ರಸಕ್ತವಾಗ ಲಾರದು. ಯುಕ್ತಿಯಿಂದ ಪ್ರಸಕ್ತವಾಗಿದೆ ಎಂದು ಹೇಳಬೇಕು. ಯುಕ್ತಿಯು ಕಾಮ ಚಾರಿಯಾದ್ದರಿಂದ ಯುಕ್ತಿಯಿಂದ ನಿರ್ಗುಣನಲ್ಲಿ ಪ್ರಸಕ್ತವಾದಂತೆ ಯುಕ್ತಿಯಿಂದಲೇ ಶೂನ್ಯದಲ್ಲಿಯೂ ಜಗತ್ಪ್ರಸಕ್ತಿಗೆ ಅವಕಾಶವಿದೆ. ಆದ್ದರಿಂದ ಶಾಸ್ತ್ರಿಗಳು ಹೇಳಿದ ದೋಷ ಅಂದರೆ ಅಪ್ರಸಕ್ತ ನಿಷೇಧ. ಅದು ತಮ್ಮ ಸಿದ್ಧಾಂತಕ್ಕೂ ಅನ್ವಯಿಸತಕ್ಕದ್ದೇ. ಆದ ಕ್ಷವರೇನು ಸಮಾಧಾನ ಮಾಡಿಕೊಂಡಿದ್ದಾರೋ? ತಿಳಿಯಲಿಲ್ಲ.

ಅನಂ. ಶಾಸ್ತ್ರಿಗಳು— ಅಂದರೆ---

ಭಂ. ಶ್ರೀಗಳು— ಅಂದರೆ— ಎಂತ ಏನನ್ನುವಿರಿ? ಹೇಳಬಹುದು. ಸಭೆಯು ಪಂಡಿತರಿಗೆ “ಉಕ್ತಿದ್ವಾರಮಪಾವೃತಂ”

ಅನಂ ಶಾಸ್ತ್ರಿಗಳು— “ಯಸ್ಮಿನ್ ಪಂಚಪಂಚ ಜನಾಃ” ಎಂಬ ಶ್ರುತಿಯಲ್ಲಿ ನಿರ್ಗುಣನಲ್ಲಿ ಪ್ರಪಂಚವಿದೆ,ಯೆಂದು ಹೇಳುತ್ತದೆ. ಈ ಶ್ರುತಿಯಿಂದ ಪ್ರಸಕ್ತವಾದ ಪ್ರಪಂಚ ವನ್ನು ‘ನೇಹನಾನಾಸ್ತಿ ಕಿಂಚನ’ ಎಂಬ ವಾಕ್ಯವು ನಿಷೇಧಿಸುತ್ತದೆ. ಹೀಗಾಗಿ ಅದ್ವೈತ ಮತದಲ್ಲಿ ಅಪ್ರಸಕ್ತ ನಿಷೇಧವೆಂಬ ದೋಷಕ್ಕೆ ಸ್ಥಾನವಿರಲಾರದು.

ಭಂ. ಶ್ರೀಗಳು— ಈಗ ಬೇಕೆಂದೇ ಕೆಸರಿಗೆ ಕೈಹಾಕಿಕೊಂಡು ಪುನಃ ಕೈ ತೊಳ ಕೊಳ್ಳುವದು. ಅಯುಕ್ತವಲ್ಲವೇ ? ಇದಕ್ಕಿಂತ ಕೈಹಾಕದೆ ಸುಮ್ಮನಿರುವದೇ ಉತ್ತಮ. ಇದರಂತೆ, ಶ್ರುತಿಯು ನಿರ್ಗುಣನಲ್ಲಿ ಪ್ರಪಂಚ ಪ್ರಸಕ್ತಿಯನ್ನು ವೃಥಾ ಮಾಡಿ ತಾನೇ ನಿಷೇಧಿಸುವದಕ್ಕಿಂತ ಪ್ರಸಕ್ತಿ ಮಾಡದಿರುವದೇ ಉತ್ತಮವಲ್ಲವೇ ? ಇದಕ್ಕೆ (ತಾನೇ ಪ್ರಸಕ್ತಿ ಮಾಡಿ ತಾನೇ ನಿಷೇಧಿಸುತ್ತದೆ. ಎಂಬುದಕ್ಕೆ) ಸರಿಯಾದ ದೃಷ್ಟಾಂತವೂ ಅಪೂರ್ವವೇ ಇರಬಹುದು.

ಶಂಕರಾಚಾರ್ಯರು- ಶ್ರುತಿ ಪ್ರಾಪ್ತವಾದುದನ್ನು ಶ್ರುತಿಯೇ ನಿಷೇಧ ಮಾಡಿದುದಕ್ಕೆ ದೃಷ್ಟಾಂತವೇನಾದರೂ ಇದ್ದರೆ ಈ ಸಭೆಯಲ್ಲಿರುವ ಮೀಮಾಂಸಾ ಪಂಡಿತರು ಯಾರಾದರೂ ಹೇಳಬಹುದು.

ಮೀ. ಪಂಡಿತರು— ' ಅತಿರಾತ್ರೇ ಷೋಡಶೀ ನಂ ಗೃಹ್ಣಾತಿ ಅತಿರಾತ್ರ ಯಾಗದಲ್ಲಿ ಷೋಡಶೀ ಎಂಬ ಪಾತ್ರೆಯನ್ನು ಮುಟ್ಟಬೇಕೆಂದು ಹೇಳಿ ' ನಾತಿರಾತ್ರೇ ಷೋಡಶಿನಂ ಗೃಹ್ಣಾತಿ ' ಅತಿರಾತ್ರ ಯಾಗದಲ್ಲಿ ಆ ಪಾತ್ರೆಯನ್ನು ಮುಟ್ಟಬಾರದೆಂದು ನಿಷೇಧಮಾಡಿದ್ದಾರೆ. " ಉದಿತೇ ಜುಹೋತಿ ಅನುದಿತೇ ಜುಹೋತಿ " ಇತ್ಯಾದಿ ಅನೇಕ ಉದಾಹರಣೆಗಳಿವೆ. ಆದ್ದರಿಂದ ಶ್ರುತಿಪ್ರಾಪ್ತವಾದುದನ್ನು ಶ್ರುತಿಯಿಂದಲೇ ನಿಷೇಧಿಸಬಹುದು.

ಅನಂ. ಶಾಸ್ತ್ರಿಗಳು— ಪಂಡಿತರು ಸ್ವಲ್ಪ ಗಮನಿಸಬೇಕು ತಾವಂದದ್ದು ಸರಿಯಾದ ಉದಾಹರಣೆಯಾಗಲಾರದು. ಇವುಗಳಲ್ಲಿ ವಿಕಲ್ಪ ಅತಿರಾತ್ರಯಾಗದಲ್ಲಿ ಷೋಡಶೀ ಪಾತ್ರೆಯನ್ನುಮುಟ್ಟಿದರೂ ಮುಟ್ಟಬಹುದು. ಇಲ್ಲವಾದರೆ ಮುಟ್ಟದಿದ್ದರೂ ಭಾಧಕವಿಲ್ಲನೆಂದು ನಿರ್ಣಯಿಸಿರುವಾಗ ಒಂದು ವಾಕ್ಯಕ್ಕೆ ಇನ್ನೊಂದುವಾಕ್ಯವು ನಿಷೇಧಕವೆಂಬುದಕ್ಕೆ ಇದು ದೃಷ್ಟಾಂತವಾಗುವದು ಹೇಗೆ ?

ಭಂ. ಶ್ರೀಗಳು— ಪೂರ್ವ ಮೀಮಾಂಸಾ ಉದಾಹರಣೆಯನ್ನು ಹೇಳಿದರೂ ಶಂಕರಾಚಾರ್ಯರ ಸಿದ್ಧಾಂತಕ್ಕೆ ವಿರುದ್ಧವಾಗುತ್ತದೆ. ಯಾಕೆಂದರೆ ಅವರು ತಮ್ಮ ಬ್ರಹ್ಮ ಸೂತ್ರ ಭಾಷ್ಯದಲ್ಲಿ ' ಸವಾ ಏಷ ಆತ್ಮಾ ನೇತಿ ನೇತಿ ' ಎಂಬ ಶ್ರುತ್ಯರ್ಥವನ್ನು ವಿಚಾರ ಮಾಡುತ್ತಾ ಶ್ರುತಿವಿಹಿತವಾದುದನ್ನು ಶ್ರುತಿಯೇ ನಿಷೇಧಿಸುವದು, 'ಪ್ರಕ್ಷಾಲನಾದ್ಧಿ ಪಂಕಸ್ಯ' ಎಂಬ ನ್ಯಾಯ ವಿರುದ್ಧವಾದ್ದರಿಂದ ಶ್ರುತಿ ಪ್ರಾಪ್ತ ಬ್ರಹ್ಮನನ್ನು ಈ ಶ್ರುತಿಯು ನಿಷೇಧ ಮಾಡಲಾರದು. ಎಂದು ಸಿದ್ಧಾಂತ ಮಾಡಿದ್ದಾರೆ. ಆದ್ದರಿಂದ ಈ ಸಂದರ್ಭದಲ್ಲಿ ಪೂರ್ವ ಮೀಮಾಂಸಾ ಉದಾಹರಣೆಗಳನ್ನು ಹುಡುಕುವದು ಅನಾವಶ್ಯಕ.

ಅನಂ. ಶಾಸ್ತ್ರಿಗಳು— ಶ್ರುತಿತಾತ್ಪರ್ಯ ಪರಿಜ್ಞಾನ ಪ್ರಾಪ್ತವಾದುದನ್ನು ಶ್ರುತಿಯು ನಿಷೇಧ ಮಾಡಬಹುದಷ್ಟೇ ? " ಇಷ್ಟಾಪೂರ್ತಂ ಮನ್ಯಮಾನಾ ವರಿಷ್ಠಂ " ಎಂಬ ಶ್ರುತಿಯಲ್ಲಿ ಶ್ರುತಿತಾತ್ಪರ್ಯ ತಿಳಿಯದೆ ಪ್ರಾಪ್ತವಾದ ಸ್ವರ್ಗಾದಿಗಳನ್ನು ಅನುವಾದ ಮಾಡಿ ನಿಷೇಧಮಾಡಿದ್ದಾರೆ.

ಭಂ. ಶ್ರೀಗಳು— ಅಂದರೆ—?

ಅನಂ. ಶಾಸ್ತ್ರಿಗಳು— ಅಂದರೆ, " ಜ್ಯೋತಿಷ್ಟೋಮೇನ ಸ್ವರ್ಗಕಾಮೋ ಯಜೇತ " ಎಂಬ ಶ್ರುತಿಯ ತಾತ್ಪರ್ಯವೇನಂದರೆ ಜ್ಯೋತಿಷ್ಟೋಮಾದಿ ಯಜ್ಞಗಳಿಂದ ಶುದ್ಧಾಂತ,

ಕರಣನಾಗಿ ಬ್ರಹ್ಮಜ್ಞಾನವನ್ನು ಸಂಪಾದಿಸಿ ಬಂಧನಿವೃತ್ತಿರೂಪವಾದ ಮಹಾಪುರುಷಾರ್ಥ ಸಾಧನ. ಅದನ್ನು ಮಾಡಿದ ಮನುಷ್ಯನು ಧನ್ಯನಾಗುತ್ತಾನೆಂದು ಕೆಲವರು ತಿಳಿದುಕೊಂಡಾಗ ಆ ಭ್ರಾಂತಿಯನ್ನು ನಿರಾಕರಿಸಲಿಕ್ಕಾಗಿ 'ಇಷ್ಟಾಪೂರ್ತಂ' ಎಂಬ ಶ್ರುತಿಯು ಪ್ರಾಪ್ತವಾಗಿದೆ. ಪ್ರಕೃತ ಶ್ರುತಿಗೆ ದ್ವೈತ ಪ್ರಪಂಚದಲ್ಲಿ ತಾತ್ಪರ್ಯವಿಲ್ಲ ಅದನ್ನು ತಿಳಿಯದೆ ಇರುವವರಿಗೆ ನಿಜವಾದ ಶ್ರುತಿ ತಾತ್ಪರ್ಯವನ್ನು ತಿಳಿಸಲು ನೇಹನಾನಾಸ್ತಿ ಎಂಬಿತ್ಯಾದಿ ವಾಕ್ಯಗಳು ಹೊರಟಿವೆ ಅಂದರೆ ಬಾಧಕವೇನು ?

ಭಂ. ಶ್ರೀಗಳು— ದ್ವೈತಪ್ರಪಂಚವನ್ನು ಶ್ರುತಿಯಲ್ಲಿ ಹೇಳಿದರೂ ಶ್ರುತಿಗೆ ಅದರಲ್ಲಿ ತಾತ್ಪರ್ಯವಿಲ್ಲವೆಂದು ಹೇಗೆ ನಿರ್ಧಾರ ಮಾಡಿದಿರಿ ? ನಾವು ಆರಂಭದಲ್ಲಿ ದ್ವೈತವು ಅಪೂರ್ವವಾಗಿದೆ. ಅಪೂರ್ವತಾ ಎಂಬ ತಾತ್ಪರ್ಯ ಲಿಂಗವಿರುವದರಿಂದ ದ್ವೈತವಾಕ್ಯಗಳಿಗೆ ದ್ವೈತ ಪ್ರಪಂಚದಲ್ಲಿ ತಾತ್ಪರ್ಯವಿರಲು ಅಡ್ಡಿಯಿಲ್ಲವೆಂದು ಸಮರ್ಥನೆ ಮಾಡಿದ್ದೇವೆ. ಆದ್ದರಿಂದ ಶ್ರುತಿಯ ತಾತ್ಪರ್ಯ ಜ್ಞಾನವಿಲ್ಲದೆ ಪ್ರಾಪ್ತವಾದ ಪ್ರಪಂಚವನ್ನು 'ನೇಹನಾಸ್ತಿ ಕಿಂಚನ' ಎಂಬ ಶ್ರುತಿಯು ನಿಷೇಧ ಮಾಡುತ್ತದೆ ಎಂಬುದು ಯುಕ್ತವಲ್ಲ.

ಕಂ. ಆಚಾರ್ಯರು— ನಿಜ, ನಿಜ. ಅನಂತಕೃಷ್ಣ ಶಾಸ್ತ್ರಿಗಳೇ, ಭಂಡಾರಕೇರಿ ಶ್ರೀಗಳು ಅಪೂರ್ವತಾ ಎಂಬ ತಾತ್ಪರ್ಯ ಲಿಂಗವನ್ನು ಸಮರ್ಥನೆ ಮಾಡಿದ್ದಾರೆ. ಇನ್ನು ಉಪಕ್ರಮಾದಿ ತಾತ್ಪರ್ಯ ಲಿಂಗಗಳನ್ನು ವಿಚಾರ ಮಾಡುವದಾದರೆ ಮಾಡಬೇಕು. ಅದನ್ನು ತಮ್ಮ ಸಿದ್ಧಾಂತ ಗ್ರಂಥಗಳಲ್ಲಿ ತುಂಬಾ ಸಮರ್ಥಿಸಿದ್ದಾರೆ. ಆದ್ದರಿಂದ ಈಗ ಈ ವಿಚಾರವನ್ನು ಸಾಕುಮಾಡೋಣ. ನಾವೀ ವಿಷಯವನ್ನು ಸಭಿಕರಿಗೆ ತಿಳಿಯುವಂತೆ ತಮಿಳು ಭಾಷೆಯಿಂದ ಒಮ್ಮೆ ಅನುವಾದ ಮಾಡುತ್ತೇವೆ. ಅಲ್ಲದೆ ಈ ಸಭೆಗೆ ಉಡುಪಿ ಶ್ರೀಪಾದಂಗಳವರು ಬಂದಿರುವದು ಅಪೂರ್ವ ಸಂಗತಿ. ಇವರು ಮಹಾ ಪಂಡಿತರೆಂದು ನಾವು ಕಿವಿಯಿಂದಲೇ ಕೇಳಿದ್ದು. ಈಗ ನಿಮ್ಮ ಜೊತೆಗೆ ಸತ್ಯವಾಗಿ ಅನುಭವಿಸಿದ್ದೇವೆ. ಆದ್ದರಿಂದ ಇವರಿಗೆ ಪೀತಾಂಬರವನ್ನು ಮಠದಕಡೆಯಿಂದ ದಿವಾನರು ಹೊದಿಸಿ ಸತ್ಕಾರ ಮಾಡುವದೆಂದು ನಿಶ್ಚಯಿಸಿದ್ದೇವೆ. ನಂತರ ಇಂದಿನ ಕಾರ್ಯಕ್ರಮವು ಮುಕ್ತಾಯಗೊಳ್ಳುವದು. (ಎಂದು ಹೇಳಿ ಕಾಮಕೋಟಿ ಶಂಕರಾಚಾರ್ಯರು ಇದುವರೆಗೆ ನಡೆದ ಪ್ರತಿಯೊಂದು ವಿಚಾರವನ್ನೂ ತಮಿಳು ಭಾಷೆಯಲ್ಲಿ ಉಪನ್ಯಾಸಮಾಡಿ ದಿವಾನರಿಂದ ಪೀತಾಂಬರವನ್ನು ಹೊದಿಸಿದರು. ಮೇಲ್ಕಂಡ ಎಲ್ಲಾ ವಿಚಾರಗಳೂ ಮದರಾಸಿನಲ್ಲಿ ಹೊರಡುವ ಹಿಂದೂ ಮೊದಲಾದ ಇಂಗ್ಲಿಷ್ ಪೇಪರುಗಳಲ್ಲಿಯೂ ಅದ್ವೈತ ಸಭೆಯ ಕಡೆಯಿಂದಲೇ ೫೭ ನೇ ಮಾರ್ಚಿ ತಾ. ೨೭, ೨೮, ೨೯ ಈ ಮೂರು ನಾಲ್ಕು ದಿವಸಗಳಲ್ಲಿ ಪ್ರಕಟಿಸಲ್ಪಟ್ಟಿದೆ. ಸಭಿಕರ ಅಪೇಕ್ಷೆಯಂತೆ ಇದೇ ವಾಕ್ಯಾರ್ಥ ವಿನೋದವನ್ನು ೧೯೫೭ ನೇ ಫೆಬ್ರುವರಿಯಲ್ಲಿ ಉಡುಪಿ ಶ್ರೀಕೃಷ್ಣ ಮಠದಲ್ಲಿ ನಡೆದ ಶ್ರೀ ಮಾಧ್ವಸಿದ್ಧಾಂತ ಸಂವರ್ಧನೀ ಸಭೆಯಲ್ಲಿ ೧೪ ನೇ ಅಧಿವೇಶನದಲ್ಲಿಯೂ ವಿವರಿಸಲಾಗಿದೆ.)

ಸಂ. ಕಾರ್ಯದರ್ಶಿ